ಇ ಎಕ್ಸ ನಂ**. 45/2020** ಪಿ**.**ಡಬ್ಲ್ಯೂ**- 1**

<u>ಸಾಕ್ಷಿಯನ್ನು ದಿನಾಂಕ **2.9.2022** ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು**.**</u>

<u>ಪಾಟೀ ಸವಾಲುಃ ತೀರ್ಪುಗಾರುಣಿಗಾರ ಪರ ವಕೀಲರಿಂದಃ</u>

ತೀರ್ಪುರುಣಿಗಾರ ನನ್ನ ಹೆಂಡತಿ ತಮ್ಮ ಎಂದರೆ ಸರಿ. ಕ್ರಯಪತ್ರ ಬರೆದುಕೊಡಬೇಕು ಎಂದು ನಾನು ಮೊದಲು ಓಎಸ್ 96/2016 ರಂತೆ ದಾವೆ ಹೂಡಿರುತ್ತೇನೆ ಎಂದರೆ ಸರಿ. ಸದರಿ ದಾವೆಯನ್ನು ನಾವು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ರಾಜಿಯಾದಂತೆ ನಾನು ತೀರ್ಪುರುಣಿಗಾರರಿಂದ ಎರಡು ಚೆಕ್ ಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ರಾಜೀ ಪತ್ರದಲ್ಲಿ ನಾನು ಕರಾರುಪತ್ರವನ್ನು ತೀರ್ಪುರುಣಿಗಾರ ಖರ್ಚಿನಲ್ಲಿ ರದ್ದತಿಪಡಿಸಿಕೊಡುತ್ತೇನೆ ಎಂದು ಒಪ್ಪಿ ಕೊಂಡಿರುತ್ತೇನೆ ಎಂದರೆ ಸರಿ. ಹಣ ನನಗೆ ಪಾವತಿ ಮಾಡದ ಕಾರಣ ನಾನು ಕರಾರನ್ನು ರದ್ದುಪಡಿಸಿರುವುದಿಲ್ಲ. ಸದರಿ ಚೆಕ್ ಗಳ ಮೇಲೆ ಹುಣಸೂರು ನ್ಯಾಯಾಲಯದಲ್ಲಿ ಚೆಕ್ ಕೇಸು ದಾಖಲಿಸಿರುತ್ತೇನೆ ಎಂದರೆ ಸರಿ. ಈ ಅರ್ಜಿಯಲ್ಲಿ ನನಗೆ ತೀರ್ಪುರುಣಿಗಾರರು 5 ಲಕ್ಷ ಹಣವನ್ನು ಪಾವತಿ ಮಾಡಿರುತ್ತಾರೆ ಎಂದರೆ ಸರಿ. ವಾದಿ ಮಾಡಿರುವ ಲೇಔಟ್ ನಲ್ಲಿ ನಿವೇಶನಗಳನ್ನು ಮಾರಾಟ ಮಾಡಿರುವುದಿಲ್ಲ ಎಂದರೆ ಸರಿ. ಅವರಿಗೆ ಸರ್ಕಾರದಿಂದ ಆದೇಶವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆದೇಶವಾಗಿರುವ ಬಗ್ಗೆ ದಾಖಲೆಯನ್ನು ನಾನು ನೋಡಿರುತ್ತೇನೆ, ಅದನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ತೀರ್ಪುರುಣಿಗಾರರು ಕೆಲಸಕ್ಕೆ ಹೋಗುವುದಿಲ್ಲ, ಆದರೆ ಅವರಿಗೆ ಬಾಡಿಗೆ ಬರುವ ಕಟ್ಟಡಗಳು ಇರುತ್ತವೆ. ಅದರ ಸಂಬಂಧದ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ತೀರ್ಪುರುಣಿಗಾರರು ನಿವೇಶನಗಳನ್ನು ಬೇರೆಯವರಿಗೆ ಮಾರಾಟ ಮಾಡಿ ಹಣವನ್ನು ನನಗೆ ನೀಡಬಹುದು, ಆದರೆ ಬೇಕೆಂತಲೇ ನೀಡುತ್ತಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.